**ಸಾಕ್ಷಿಯನ್ನು ದಿಃ *04/02/2026* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು. ಮುಂದುದವರೆದ ಪಾಟೀ ಸವಾಲು : ಶ್ರೀ ಪಿಸಿಜಿ ವಕೀಲರಿಂದ 2 ನೇ ಎದುರುದಾರರ ಪರವಾಗಿ.**

ಅಪಘಾತವನ್ನು ನಾನು ನೋಡಿಲ್ಲ ಎಂದರೆ ನಿಜ. ಅಪಘಾತದ ವಿಷಯ ತಾಜ ಹೋಟೇಲನವರು ನನ್ನ ಮಾವನಿಗೆ ತಿಳಿಸಿದರು, ನನ್ನ ಮಾವನಿಂದ ನನಗೆ ಸುದ್ದಿ ತಿಳಿಯಿತು, ಆಗ ನಾನು ನನ್ನ ತವರುಮನೆಯಲ್ಲಿ ಇದ್ದೆ. ಅಪಘಾತ ವಿಷಯ ತಿಳಿದ ನಂತರ ನಾನು ಅಪಘಾತದ ಸ್ಥಳಕ್ಕೆ ಹೋಗಿರಲಿಲ್ಲ, ನನ್ನ ಮಾವ ಹೋಗಿದ್ದರು. ಅಪಘಾತವು ಕೆ.ಆರ್.ಹಳ್ಳಿ, ಹಿರಿಯೂರ ಹತ್ತಿರ ಇರುವ ತಾಜಾ ಹೋಟೇಲ ಎದುರುಗಡೆ ಆಗಿರುತ್ತದೆ ಎಂದು ಕೇಳಿರುತ್ತೇನೆ. ಅಪಘಾತವಾದ ನಂತರ ನನ್ನ ಗಂಡನನ್ನು ಪಿ.ಎಂ. ಮಾಡಿ ಮನೆಗೆ ತಂದಾಗ ನೋಡಿರುತ್ತೇನೆ. ಅಪಘಾತದ ದೂರನ್ನು ನನ್ನ ಮಾವ ನೀಡಿರುತ್ತಾರೆ. ಹಿರಿಯೂರು ಪೊಲೀಸಠಾಣೆಯಲ್ಲಿ ನಾನು ನನ್ನ ಹೇಳಿಕೆ ಕೊಟ್ಟಿದ್ದೇನೆ. ಈ ವಿಷಯವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಹೇಗೆ ಆಯಿತು ಎಂದು ನನ್ನ ಮಾವನಿಂದ ಕೇಳಿದ್ದು ಇರುತ್ತದೆ. ಅಪಘಾತ ನೋಡಿದ ವ್ಯಕ್ತಿಗಳ ನುಡಿ ಸಾಕ್ಷವನ್ನು ಮಾಡಿಸುತ್ತಿರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

ನನ್ನ ಪ್ರಮಾಣಪತ್ರದ 3 ನೇ ಖಂಡಿಕೆಯಲ್ಲಿ ಹೇಳಿರುವ ವಿಷಯ ಸಂಗತಿ ನಿಜವಿರುತ್ತವೆ. ನನ್ನ ಗಂಡ ಬೆಂಗಳೂರಿಗೆ ಹೋರಟ ನಂತರ ನಾನು ನನ್ನ ತವರುಮನೆಗೆ ಹೋಗಿದ್ದೆ. ಈ ವಿಷಯ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಳೆ ಬರುತ್ತಿರುವಾಗ ನನ್ನ ಗಂಡ ಲಾರಿ ಕೆಳಗೆ ಮಲಗಿಕೊಂಡರು ಎಂದು 3 ನೇ ಖಂಡಿಕೆಯಲ್ಲಿ ಹೇಳಿರುವ ವಿಷಯ ಸಂಗತಿ ನಿಜವಿರುತ್ತವೆ. ಸಾಮಾನ್ಯವಾಗಿ ಮಳೆ ಬರುವಾಗ ಸಮೀಪ ಇರುವ ಹೋಟೇಲನಲ್ಲಿ ವಾಹನ ನಿಲ್ಲಿಸಿ ಹೋಟೇಲ ಒಳಗೆ ಹೋಗುತ್ತಾರೆ ಹೊರತು ಲಾರಿ ಕೆಳಗೆ ಹೋಗಿ ಮಲಗಿಕೊಳ್ಳುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಸದರಿ ದಿನದಂದು ಅವರಿಗೆ ಏನೂ ಅನಿಸಿತು ಎಂದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

ಲಾರಿ ಚಾಲಕ ನೋಡದೆ ನನ್ನ ಪತಿಯ ಮೇಲೆ ಲಾರಿ ಹಾಯಿಸಿಕೊಂಡು ಹೋಗಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ ಲಾರಿ ಚಾಲಕನದು ಯಾವುದೇ ರೀತಿ ತಪ್ಪು ಇರುವುದಿಲ್ಲ, ನನ್ನ ಪತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಹೊರತು ಸದರಿ ಘಟನೆ ರಸ್ತೆ

ಅಪಘಾತವಾಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ಪತಿ ಸದರಿ ಲಾರಿ ಕೆಳಗೆ ಮಲಗಿರುವುದಿಲ್ಲ, ಲಾರಿ ಚಾಲಕ ಸದರಿ ಲಾರಿಯನ್ನು ಅಲ್ಲಿ ನಿಲ್ಲಿಸಿರುವುದಿಲ್ಲ, ಲಾರಿ ಚಾಲಕನದು ಯಾವುದೇ ರೀತಿ ತಪ್ಪು ಇರುವುದಿಲ್ಲ, ಅಪಘಾತಕ್ಕೂ ಮತ್ತು ಲಾರಿಗೆ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಸದರಿ ಲಾರಿಯ ಹಿಂಬದಿ ಟಾಯರ ನನ್ನ ಪತಿಯ ಮೇಲೆ ಹಾಯ್ದು ಹೋಗಿರುವುದನ್ನು ತಾಜಾ ಹೋಟೇಲನಲ್ಲಿರುವ ಸಿಸಿಟಿವಿ ಪುಟೇಜ ನೋಡಿ ಹೇಳುತ್ತಿದ್ದೇನೆ, ಆದರೆ ಸದರಿ ಪುಟೇಜ ಹಾಜರುಪಡಿಸಿಲ್ಲ. ಸಿಸಿಟಿವಿ ಪುಟೇಜನಲ್ಲಿ ಲಾರಿ ಹಾಯಿಸಿಲ್ಲ ಎಂದು ಗೊತ್ತಾಗಿ ಅದನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸಿಸಿಟಿವಿ ಪುಟೇಜನ್ನು ಪೊಲೀಸಠಾಣೆಯಿಂದ ತಂದು ಹಾಜರುಪಡಿಸುತ್ತೇನೆ. ಲಾರಿಗೆ ಮತ್ತು ಸದರಿ ಅಪಘಾತಕ್ಕೆ ಯಾವುದೇ ಸಂಬಂಧವಿಲ್ಲ, ಲಾರಿಯನ್ನು ಸದರಿ ಪ್ರಕರಣಕ್ಕೆ ಸುಳ್ಳಾಗಿ ಸೇರಿಸಿಕೊಂಡು ಅದರ ವಿರುದ್ದ ಸುಳ್ಳಾಗಿ ಮಾಗಣಿ ಕೇಳಿರುತ್ತೇವೆ ಎಂದರೆ ಸರಿಯಲ್ಲ.

ಜೋಮೆಟೊ ಕಂಪನಿಯಲ್ಲಿ ನನ್ನ ಪತಿ ಕಳೆದ ಎರಡು ವರ್ಷಗಳಿಂದ ಕೆಲಸ ಮಾಡುತ್ತಿದ್ದರು. ಈ ಕುರಿತು ಮತ್ತು ಸಂಬಳದ ಕುರಿತು ನಾನು ದಾಖಲೆ ಹಾಜರುಪಡಿಸಿಲ್ಲ. ಆದ್ದರಿಂದ ಸದರಿ ಹೇಳಿಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬೆಂಗಳೂರಿನಲ್ಲಿ ನನ್ನ ಪತಿ ಕೆಲಸ ಮಾಡುವ ಸ್ಥಳದಲ್ಲಿ ಒಂದು ವರ್ಷದ ಕಾಲ ಕೂಡಿಯೇ ವಾಸವಿದ್ದೇವು, ನಂತರ ನಾನು ನನ್ನ ಗಂಡನ ಮನೆಯಲ್ಲಿ ವಾಸವಿದ್ದೆ, ಆ ನಂತರ ನನ್ನ ತವರುಮನೆಯಲ್ಲಿ ವಾಸವಿದ್ದೆ. ಅಪಘಾತ ಸಮಯದಲ್ಲಿ ನಾನು ನನ್ನ ತವರುಮನೆಯಲ್ಲಿ ವಾಸವಿದ್ದೆ ಎಂದರೆ ಸರಿಯಲ್ಲ. 3 ಮತ್ತು 4 ನೇ ಎದುರುದಾರರು ಅಂದರೆ ನನ್ನ ಪತಿಯ ತಂದೆ ತಾಯಿ ಸಹ ನನ್ನ ಪತಿಯ ಸಂಬಳದ ಮೇಲೆ ಅವಲಂಬಿತರಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅತ್ತೆ ಮಾವ ನನ್ನ ಗಂಡನ ಸಹೋದರನ ಜೊತೆಗೆ ವಾಸವಿದ್ದರು, ನಾವು ಪ್ರತ್ಯೇಕವಾಗಿ ವಾಸವಿದ್ದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮಧ್ಯ ವೈಷಮವಿರುವ ಕಾರಣ ನಾನು ಅವರನ್ನು ಸೇರಿಸಿ ಪ್ರಕರಣ ಹೂಡಿಲ್ಲ, ನಾನು ಅವರನ್ನು ಎದುರುದಾರರು ಎಂದು ಕಾಣಿಸಿದ್ದೇನೆ ಎಂದರೆ ಸರಿಯಲ್ಲ. ಈ ಕಾರಣಕ್ಕೆ ನನ್ನ ಅತ್ತೆ ಮಾವ ಬೈಲಹೊಂಗಲ ನ್ಯಾಯಾಲಯದಲ್ಲಿ ಇದೇ ರೀತಿ ಪ್ರಕರಣ ಎಂವಿಸಿ ನಂ.2518/2024 ರನ್ನು ಹೂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ಹೇಳಿಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಶವ ಸಂಸ್ಕಾರಕ್ಕೆ ಒಂದು ಲಕ್ಷ ರೂಪಾಯಿಗಳು ಖರ್ಚಾಗಿವೆ ಎಂದು ಹೇಳಿರುವ ಹೇಳಿಕೆ ಆಧಾರರಹಿತ ಹೇಳಿಕೆ ಎಂದರೆ ಸರಿಯಲ್ಲ. ಲಾರಿ ಚಾಲಕನಿಗೆ ಸೂಕ್ತವಾದ ಚಾಲನಾ ಪರವಾನಿಗೆ ಪತ್ರವಿರಲಿಲ್ಲ ಮತ್ತ ಲಾರಿಗೆ ಎಫ.ಸಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ 1 ನೇ ಎದುರುದಾರರು ವಿಮೆ ಷರತ್ತುಗಳನ್ನು ಉಲ್ಲಂಘನೆ ಮಾಡಿರುವ ಕಾರಣ 2 ನೇ ಎದುರುದಾರ ವಿಮೆ ಕಂಪನಿಯವರು ಯಾವುದೇ ಪರಿಹಾರ ಹಣ ಕೊಡಲು ಬಾದ್ಯಸ್ಥರಲ್ಲ ಎಂದು ಸೂಚಿಸುವ ನಿಮ್ಮ ಎಲ್ಲ ಸಲಹೆಗಳು ಸರಿಯಲ್ಲ. ನಾನು ಮತ್ತು ನನ್ನ ಮಾವ ಹಿರಿಯಾರು ಪೊಲೀಸರೊಂದಿಗೆ ಮಿಲಾಪಿಯಾಗಿ ಪರಿಹಾರ ಹಣ ಪಡೆಯುವ ಸಲುವಾಗಿ ಸುಳ್ಳು ದಾಖಲಾತಿಗಳನ್ನು ಸೃಷ್ಟೀಕರಣ ಮಾಡಿ ಅದರಂತೆ ಸುಸ್ಳು ಪ್ರಕರಣ ಹೂಡಿ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ.

***ಪಾಟೀ ಸವಾಲು : 1 ಮತ್ತು 3 ನೇ ಎದುರುದಾರರು ಯಾವುದೇ ಆಕ್ಷೇಪಣೆ ಪತ್ರ ಸಲ್ಲಿಸದ ಕಾರಣ ಅವರ ಪರವಾಗಿ ಪಾಟೀ ಸವಾಲು ಇರುವುದಿಲ್ಲ ಎಂದು ಪರಿಗಣಿಸಲಾಯಿತು.***

***ಮರು ವಿಚಾರಣೆ : ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.